ಕಾರ್ಕಳ ತಾಲ್ಲೂಕಿನ ಕೂಡ್ಲುತೀರ್ಥ ಎಂದು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸುವುದು

1048 (1626) ಶ್ರೀ ಹೆಚ್. ಗೋಪಾಲ ಬಂಡಾರಿ (ಕಾರ್ಕಳ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಕೂಡ್ಲುತೀರ್ಥ (ನಾಟ್ಪಾಲು ಗ್ರಾಮ) ಎಂಬಲ್ಲಿ ಸಾಕಷ್ಟು ಪ್ರವಾಸಿಗರು ಜಲಪಾತವನ್ನು ವೀಕ್ಷಿಸಲು ಬರುತ್ತಿದ್ದು, ಅದನ್ನು ಪ್ರವಾಸಿ ಕೇಂದ್ರವಾಗಿ ಪರಿವರ್ತಿಸುವ ಬಗ್ಗೆ ಇಲಾಖೆ ಏನಾದರೂ ಕ್ರಮ ಕೈಗೊಂಡಿದೆಯೆ;

ಆ) ಇಲಾಖೆಯ ಅಧಿಕಾರಿಗಳು ಸದ್ರಿ ಸ್ಥಳವನ್ನು ಪರಿಶೀಲಿಸಿದ್ದಾರೆಯೆ;

ಇ) ಹಾಗಿದ್ದಲ್ಲಿ, ಇಲಾಖೆಯು ಯೋಜನೆಗಳು ಏನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) ಪ್ರವಾಸಿ ಕೇಂದ್ರವಾಗಿ ಪರಿವರ್ತಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಹೌದು

ಇ) ಕೂಡ್ಲು ತೀರ್ಥಕ್ಕೆ ರಸ್ತೆ, ಬೆಟ್ಟ, ಏರಲು ಮೆಟ್ಟಿಲುಗಳು ಮತ್ತು ಮಾರ್ಗಸೂಚಿ ಫಲಕಗಳನ್ನು ಅಳವಡಿಸುವ ಬಗ್ಗೆ ಪರಿಶೀಲಿಸಲಾಗುವುದು.

The Government will consider and take the following steps to provides
1. Development of Road to Kudluthirtha.

2. Stairs to climb the hill

3. Signages.

ಅರಣ್ಯ ಇಲಾಖೆಯ ಜಮೀನಿನ ದಾಖಲೆ

1049 (1627) ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಹಾಗೂ ಕುಂದಾಪುರ ತಾಲ್ಲೂಕುಗಳಿಂದ ಎಷ್ಟು ಅರ್ಜಿಗಳು ದರಖಾಸ್ತು, ಅಕ್ರಮ ಸಕ್ರಮ ಜಮೀನು ಮಂಜೂರಾದ ನಂತರ ಕಂದಾಯ ಇಲಾಖಾಧಿಕಾರಿಗಳಿಂದ ಅರಣ್ಯ ಇಲಾಖೆಗೆ ಪರಿಶೀಲನೆಗೆ ಬಂದಿದೆ? ಅವುಗಳನ್ನು ಯಾವ ರೀತಿಯ ತೀರ್ಮಾನ ಮಾಡಲಾಗಿದೆ?

2. ಅರಣ್ಯ ಇಲಾಖೆಯ ಜಮೀನಿನ ಬಗ್ಗೆ ಇಲಾಖೆಯಲ್ಲಿ ದಾಖಲೆ ಇದೆಯೇ? ಇದ್ದರೆ ಇಲಾಖೆಯ ಜಮೀನುಗಳನ್ನು ಯಾವ ದಾಖಲೆಯ ಆಧಾರದಲ್ಲಿ ಗುರುತಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರಸಚಿವರು) :

ಅ) 29 ದರಖಾಸ್ತು ಹಾಗೂ 270 ಅಕ್ರಮ ಸಕ್ರಮ ಕಡತಗಳು ವಿಲೇವಾರಿಗೆ ಬಾಕಿ ಇರುತ್ತದೆ. ಮತಮಾಲ್ಯ ನಿಗದಿ ಅಥವಾ ಮರಗಳನ್ನು ತೆರವುಗೊಳಿಸಲು ಸರ್ವೋಚ್ಚ ನ್ಯಾಯಾಲಯದ ರಿ.ಅ.ಸಂ: 202: 950 ಅಂತಿಮ ತೀರ್ಪು ಬರುವವರೆಗೆ ನೀರೀಕ್ಷಿಸಬೇಕೆಂದು ಜುಲೈ 1998ರ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 148 ಎಫ್ ಎಡಿ 97 ರಲ್ಲಿ ಸರ್ಕಾರದ ನಿರ್ದೇಶನ ಇರುತ್ತದೆ. ಆದ್ದರಿಂದ ಸದರಿ ಕಡತಗಳನ್ನು ವಿಲೇ ಮಾಡದೆ ಬಾಕಿ ಇರಿಸಲಾಗಿದೆ.

ಆ) ಇದೆ. ಅರಣ್ಯ ಜಮೀನುಗಳನ್ನು ರಿಸರ್ವ್ ಫಾರೆಸ್ಟ್ ನೋಟಿಫಿಕೇಶನ್ ಅನ್ವಯ 'ಸಿ' ಸ್ಟೇಟ್‌ಮೆಂಟ್ ಆಧಾರದ ಮೇಲೆ ಗುರುತಿಸಲಾಗುವುದು.

ಮೈಸೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಪತ್ರಿಕೆಗಳ ವಾಚಕರವಾಣಿ ವಿಭಾಗದಲ್ಲಿ ಸಾರ್ವಜನಿಕ ದೂರುಗಳು

1050 (1046) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಆನ್ಯ ವಾರ್ತಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ವಿವಿಧ ಪತ್ರಿಕೆಗಳ ವಾಚಕರ ವಾಣಿ ವಿಭಾಗದಲ್ಲಿ ಪ್ರಕಟವಾಗುವ ಸಾರ್ವಜನಿಕ ದೂರುಗಳನ್ನು ಆಯಾ ಇಲಾಖೆಗೆ ಕಳುಹಿಸಲು ಇರುವ ವ್ಯವಸ್ಥೆ ಏನು?

ಆ) ಈ ದೂರುಗಳ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ? ಕಾರ್ಯಗತಗೊಳಿಸಿದ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲು ಇರುವ ವಿಧಿ ವಿಧಾನಗಳೇನು?

ಇ) ಮೈಸೂರು ನಗರ ಮತ್ತು ತಾಲ್ಲೂಕಿನಿಂದ ಪ್ರಕಟವಾಗುವ ಪತ್ರಿಕೆಗಳು ಎಷ್ಟು? ಅವುಗಳಲ್ಲಿ ಎಷ್ಟು ರಹದಾರಿ ನವೀಕರಣಗೊಂಡಿದೆ? ನವೀಕರಣಗೊಳ್ಳದ ಪತ್ರಿಕೆಗಳ ವಿರುದ್ಧ ಕೈಗೊಂಡಿರುವ ಕ್ರಮವೇನು?

ಈ) ಮೈಸೂರು ತಾಲ್ಲೂಕಿನಲ್ಲಿ ಸ್ಥಾಪಿತವಾಗಿರುವ ಗ್ರಾಮಾಂತರ ಗ್ರಂಥಾಲಯಗಳು ಎಷ್ಟು? ಅಲ್ಲಿಗೆ ಸರಬರಾಜು ಮಾಡುತ್ತಿರುವ ಪತ್ರಿಕೆಗಳು ಎಷ್ಟು?

ಉ) ವಿವಿಧ ಇಲಾಖೆಗಳ ಪ್ರಚಾರ ಸಾಮಗ್ರಿಯನ್ನು ಈ ಗ್ರಾಮೀಣ ಗ್ರಂಥಾಲಯಗಳಿಗೆ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಸಚಿವರು) :

ಅ) ಮೈಸೂರು ತಾಲ್ಲೂಕು ಜಿಲ್ಲೆ ಹಾಗೂ ರಾಜ್ಯಮಟ್ಟದ ಪತ್ರಿಕೆಗಳ ವಾಚಕರ ವಾಣಿಯಲ್ಲಿ ಪ್ರಕಟವಾಗುವ ದೂರುಗಳ ಹಾಗೂ ಟೀಕೆಗಳ ಪತ್ರಿಕಾ ತುಣುಕುಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಪ್ರತಿದಿನವೂ ಕಳುಹಿಸಲಾಗುತ್ತದೆ.